ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀ ರಾಜೇಂದ್ರನ್.ಎಸ್. (ಕೋಲಾರ ಚಿನ್ನದಗಣಿ) ರವರು ನಿಯಮ 73ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ

ಕೆ.ಜಿ.ಎಫ್, ನಲ್ಲಿ ಸಂಚಾರಿ ಪೊಲೀಸ್ ವ್ಯವಸ್ಥೆ ಇಲ್ಲದೇ ಅಪಘಾತಗಳು ಜರುಗುತ್ತಿರುವುದರಿಂದ ಜರೂರಾಗಿ ಕೆ.ಜಿ.ಎಫ್. ನಗರದಲ್ಲಿ ಒಂದು ಸಂಚಾರಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಉತ್ತರ :

ಕೆ.ಜಿ.ಎಫ್. ನಲ್ಲಿ ಒಂದು ಸಂಚಾರಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಬಗ್ಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರಿಂದ ಈ ಕೆಳಗಿನಂತೆ ಪ್ರಸ್ತಾವನೆ ಸ್ವೀಕೃತವಾಗಿದೆ.

ಕೆ.ಜಿ.ಎಫ್. ನಗರಕ್ಕೆ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ಗಡಿ ರಾಜ್ಯಗಳಾಗಿರುತ್ತವೆ. ಈ ನಗರದ ವ್ಯಾಪ್ತಿ 11 ಚ.ಕಿ.ಮೀ. ವಿಸ್ತೀರ್ಣವಿದ್ದು, 3,67,830 ಜನಸಂಖ್ಯೆಯನ್ನು ಹೊಂದಿರುತ್ತದೆ. ಈಗ ಸುಮಾರು 16.265 ವಾಹನಗಳು (ಕೆ.ಎಸ್.ಆರ್.ಟಿ.ಸಿ. ವಾಹನಗಳು, ಖಾಸಗಿ ವಾಹನಗಳು, ಆಟೋರಿಕ್ಷಾಗಳು, ಮೋಟಾರ್ ಸೈಕಲ್‌ಗಳು, ಮ್ಯಾಕ್ಸಿಕ್ಯಾಬ್‌ಗಳು ಮತ್ತು ಇತರೆ ವಾಹನಗಳು) ನೊಂದಣಿಯಾಗಿರುತ್ತವೆ. ಇದಲ್ಲದೆ ಕೆ.ಜಿ.ಎಫ್ ನಗರದಿಂದ ಆಂಧ್ರಪ್ರದೇಶದ ಚಿತ್ತೂರು, ವಿ.ಕೋಟಾ, ಕುಪ್ಪಂ ಮತ್ತು ತಮಿಳುನಾಡಿನ ಕೃಷ್ಣಗಿರಿ ಗುರಿಯಾತಂ ವೆಲ್ಲೂರು ಹಾಗೂ ಮದ್ರಾಸ್ ನಗರಗಳಿಗೆ ಇಲ್ಲಿಂದಲೇ ನೇರ ಬಸ್ ಸಂಪರ್ಕವಿದ್ದು, ಅಲ್ಲಿಂದಲೂ ಸಹ ಸಾಕಷ್ಟು ವಾಹನಗಳು ಈ ನಗರಕ್ಕೆ ದಿನನಿತ್ಯ ಬಂದು ಹೋಗುತ್ತವೆ. ಹೀಗಿರುವುದರಿಂದ ಕೆ.ಜಿ.ಎಫ್ ನಗರದಲ್ಲಿ 8 ಟ್ರಾಫಿಕ್ ಪಾಯಿಂಟ್, 10 ಸಿಗ್ನಲ್ ಪಾಯಿಂಟ್‌ಗಳನ್ನು ನಿಗಧಿಪಡಿಸಿದ್ದು. ಈ ಪಾಯಿಂಟ್‌ಗಳಿಗೆ ಅನುಸಾರವಾಗಿ ಸಿಬ್ಬಂದಿಗಳ ನೇಮಕ ಮಾಡಲು ಅತ್ಯಾವಶ್ಯಕವಿರುತ್ತದೆ.

ಪ್ರಸ್ತುತ ಪ್ರಕರಣವನ್ನು ಆರ್ಥಿಕ ವರ್ಷ 2007–08ರಲ್ಲಿ ಪರಿಗಣಿಸಲು ಅವಶ್ಯ ಕ್ರಮಕ್ಕೈಗೊಳ್ಳಲಾಗುವುದು.

ಶ್ರೀ ಹೆಚ್. ನಿಂಗಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಕುಣಿಕಲ್ ಕ್ಷೇತ್ರದ ಹೆಬ್ಬುರು ಮತ್ತು ಗುಳೂರು ಹೋಬಳಿಗಳ ಮತ್ತು ತಿಪಟೂರು ತಾಲ್ಲೂಕಿನ ಹೊನವಳ್ಳಿಯ ಕುಡಿಯುವ ಏತನೀರಾವರಿ ಯೋಜನೆಗಳು ಮಂಜೂರಾಗಿ ಸುಮಾರು 6 ವರ್ಷಗಳಾಗಿವೆ, ಕಾರ್ಯಾರಂಭ ಮಾಡುವಂಥ ಪೂರ್ವದ ಎಲ್ಲಾ ಪ್ರಕ್ರಿಯೆಗಳು ಮುಗಿದು ಟೆಂಡರ್ ಸಹ ಕರೆಯಲಾಗಿದೆ. ಆದರೆ ಕಾವೇರಿ ಜಲವಿವಾದ ನ್ಯಾಯಮಂಡಳಿಯ ಮುಂದೆ ಪ್ರಕರಣವಿರುವುದರಿಂದ ಅಂತಿಮ ತೀರ್ಪು ಬರುವವರೆಗೆ ಟೆಂಡರ್ ಪ್ರಸ್ತಾವನೆಯನ್ನು ತಡೆಹಿಡಿದು ಸರ್ಕಾರ ಆದೇಶ ಹೊರಡಿಸಿದ್ದು, ಅದು ಕೂಡ 2 ವರ್ಷಗಳಾಗಿರುತ್ತದೆ. ಜಲವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪು ಹೊರಬಂದಿರುವುದರಿಂದಲೂ ಮತ್ತೆ ಈ ಯೋಜನೆಗಳು ಸಂಪೂರ್ಣವಾಗಿ ಕುಡಿಯುವ ನೀರಿನ ಯೋಜನೆಗಳಾಗಿರುವುದರಿಂದಲೂ ರಾಷ್ಟ್ರೀಯ ಜಲನೀತಿಗನುಗುಣವಾಗಿ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಬೇಕೆಂದು ನಿಯಮಗಳಿರುವುದರಿಂದಲು ಈ ಯೋಜನೆಗಳ ಶೀಘ್ರ ಕಾರ್ಯಾರಂಭ ಮಾಡಲು ನಾನು ಜಲಸಂಪನ್ಮೂಲ ಸಚಿವರ ಗಮನಸೆಳೆಯುತ್ತಿದ್ದೇನೆ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಇದು ಹೇಮಾವತಿ ಹೊನವಳ್ಳಿ ಕೆರೆಗೆ ಏತ ನೀರಾವರಿಯ ಬಗ್ಗೆ ಮಾನ್ಯ ಸದಸ್ಯರಾದ ಲಿಂಗಪ್ಪನವರು ಹೇಳಿದಂತೆ ಸುಮಾರು 6 ವರ್ಷಗಳಿಂದಲು ನೆನೆಗುದಿಗೆಗೆ ಬಿದ್ದಿದೆ. ಅರಸೀಕೆರೆ ತಾಲ್ಲೂಕಿನ ಸುಮಾರು 120 ಗ್ರಾಮಗಳಲ್ಲಿ ಫ್ಲೋರೈಡ್ ಇದೆ. ಕಾರಣ, ಹೊನವಳ್ಳಿ ಕೆರೆಗೆ ನೀರನ್ನು ಹಾಯಿಸಿದರೆ, ಸುಮಾರು ಒಂದು ಹೋಬಳಿಯ ಕೆರೆಕಟ್ಟೆಗಳಿಗೆ ನೀರು ಬರುತ್ತದೆ. ಈ ಬಗ್ಗೆ ನಾನು ಭಾರಿ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಭಾರಿ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇಬ್ಬರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ, ಈ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕೆಂದು ಈಗಾಗಲೆ ಇಲಾಖೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಲಿಖಿತ ಉತ್ತರವನ್ನು ಕೊಟ್ಟ ನಂತರ ಹೇಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೆ ಸಮಯಬೇಕಾಗಿರುವುದರಿಂದ ಹೇಳುತ್ತಿದ್ದೇನೆ. ಸಂಬಂದಪಟ್ಟ ಶಾಸಕರನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಕೂರಿಸಿಕೊಂಡು ಈ

ಕುಡಿಯುವ ನೀರಿನ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂಬುದನ್ನು ಚರ್ಚೆ ಮಾಡಬೇಕು. ಏಕೆಂದರೆ, ಅನೇಕ ವರ್ಷಗಳಿಂದ ಇದು ಟ್ರಿಬ್ಯುನಲ್‌ನಲ್ಲಿ ಇದ್ದುದ್ದರಿಂದ ಅದು ಪೆಂಡಿಗ್ ಇತ್ತು. ಈಗ ತಕ್ಷಣ ಇದನ್ನು ಕಾರ್ಯಗತ ಮಾಡಬೇಕಾದರೆ, ಮುಖ್ಯಮಂತ್ರಿಗಳೊಡನೆ ಕುಳಿತು ಚರ್ಚೆ ಮಾಡಿ, ಖಂಡಿತ ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ನಿಂಗಪ್ಪ : ಟ್ರಿಬ್ಯುನಲ್ ಮುಂದೆ ಇದ್ದಂಥ ಸಂದರ್ಭದಲ್ಲೆ 2001ರಲ್ಲಿ ಇದು ಮಂಜೂರಾಗಿದೆ. ಮತ್ತು ಪ್ರತಿವರ್ಷ ಎಲ್ಲಾ ಹಂತದ ಪ್ರಕ್ರಿಯೆಗಳು ಮುಗಿದು ಟೆಂಡರ್ ಅನ್ನು ಕೂಡ ಕರೆದಿರುವ ಒಂದು ಯೋಜನೆ ಇದಾಗಿದೆ. ಇದು ಸುಮಾರು ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂಥ ಯೋಜನೆಯಾಗಿದೆ.

ಇವತ್ತು ಏನಾಗಿದೆ, 24–07–2005ರಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು .....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಿಯಮದ ಪ್ರಕಾರ ಅವರು ಬರವಣಿಗೆಯಲ್ಲಿ ಈ ಸಭೆಗೆ ಒಂದು ಉತ್ತರ ಕೊಡಬೇಕು. ಅವರು ಉತ್ತರ ಕೊಟ್ಟ ಮೇಲೆ ನೀವು clarification ಕೇಳಬೇಕು. ಅದು ರೆಕಾರ್ಡ್‌ಗೆ ಹೋಗಬೇಕು. ಇದು ಗಮನಸೆಳೆಯುವ ಸೂಚನೆ. ಸರ್ಕ್ಯುಲೇಷನ್ ರೆಕಾರ್ಡ್‌ಗೆ ಹೋಗಬೇಕು ಅದಕ್ಕೋಸ್ಕರ ಹೇಳುತ್ತಿದ್ದೇವೆ. ನಾಳೆ ದಿವಸ ಅಧಿಕಾರಿಗಳು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಇದೇ ತರಹ ಉದಾಸೀನ ಮಾಡಬಹುದು. ಆ ಕಾರಣಕ್ಕೋಸ್ಕರ ಈ ಯೋಜನೆಯ ತೀವ್ರತೆಯನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಹಿರಿಯ ಸದಸ್ಯರು ದಯಮಾಡಿ ಅದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್. ನಿಂಗಪ್ಪ : ಆರು ವರ್ಷಗಳಾಗಿವೆ ಇನ್ನು ಕಾರ್ಯರೂಪಕ್ಕೆ ಬಂದಿಲ್ಲ. ನಮ್ಮ ದುಗುಡ ನಾವು ಹೇಳಿಕೊಳ್ಳುತ್ತಿದ್ದೇವೆ, ದಯಮಾಡಿ ಅವಕಾಶ ಮಾಡಿ ಕೊಡಿ. ನಮ್ಮ ಕಷ್ಟ ನಾವು ಹೇಳಿಕೊಳ್ಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಆಯಿತು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ರೀತಿಯ ಕುಡಿಯುವ

[ಪೀಠವನ್ನು ಉಪಸಭಾಧ್ಯಕ್ಷರು ಅಲಂಕರಿಸಿದರು]

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ, ಹೊಸನಗರ ತಾಲ್ಲೂಕಿನಲ್ಲಿ 15 ದಿವಸಗಳಿಂದ ಕರೆಂಟ್ ಇರಲಿಲ್ಲ, ಅದಕ್ಕೆ ಕಾರಣ ಮೆಸ್ಕಾಂ ಎನ್ನುವುದಕ್ಕಿಂತ, ಇತ್ತೀಚೆಗೆ ಬೀಳುತ್ತಿರುವ ಭಾರಿ ಮಳೆಯಿಂದ ಹಾಗೂ ಬೀಸತ್ತಿರುವ ಭಾರಿ ಗಾಳಿಯಿಂದ MPM ಅರು ಬೇಜವಾಬ್ದಾರಿಯಿಂದ ವಿದ್ಯುತ್ ಲೈನ್‌ಗಳ ಹತ್ತಿರವೆ ಅವೈಜ್ಞಾನಿಕವಾಗಿ ನೆಟ್ಟ ನೆಡುತೋಪುಗಳಿಂದ ಮರಗಳು ತಂತಿ–ಕಂಬಗಳ ಮೇಲೆ ಬಿದ್ದು ಹೊಸನಗರ ತಾಲ್ಲೂಕಿನ ಬೇರೆ ಬೇರೆ ಕಡೆಗಳಲ್ಲಿ 400ಕ್ಕು ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದು, ಈಗ ಕಳೆದ 15 ದಿವಸಗಳಿಂದ ತಾಲ್ಲೂಕು ಪೂರ್ತಿ ಕತ್ತಲೆಯಲ್ಲಿ ಮುಳುಗಿದ್ದು ಬೆಳಕಿಲ್ಲದೆ ಸಾರ್ವಜನಿಕರ ಜೀವನ ಅಸ್ತವ್ಯಸ್ತವಾಗಿದೆ. ಇಲಾಖೆಯ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ, ಈ MPM ಅವರು ಲೈನ್ ಹತ್ತಿರವೇ ಅಕೇಷಿಯ ಮರಗಳನ್ನು ಬೆಳೆಸಿರುವುದರಿಂದ ಅದು 75 ಅಡಿಗಳ ಎತ್ತರಕ್ಕೆ ಬೆಳೆಯುತ್ತದೆ. ಆ ಮರಗಳು ಬಿದ್ದು, 219 ಎಂದು ತಾವೆ ಹೇಳಿದ್ದಿರಿ, ಸುಮಾರು 400ಕ್ಕು ಹೆಚ್ಚು ಕಂಬಗಳು ಬಿದ್ದಿದ್ದಾವೆಂದು ನಿಮ್ಮ ಇಲಾಖೆಯವರು ಹೇಳುತ್ತಿದ್ದಾರೆ. ಆದುದರಿಂದ ಅಕೇಷಿಯ ಮರಗಳನ್ನು ಬೆಳೆಸುವುದನ್ನು ಕಡಿಮೆ ಮಾಡಬೇಕು, ಸ್ವಾಭಾವಿಕ ಅರಣ್ಯ ಮರಗಳಾದ, ಅಲಸು ಗೇರು ಇಂತವುಗಳನ್ನು ಬೆಳೆಸಿದರೆ, ಅವು ಅಷ್ಟು ಎತ್ತರಕ್ಕೆ ಬೆಳೆಯುವುದಿಲ್ಲ, ಲೈನ್‌ಗಳ ಮೇಲೆ ಬೀಳುವುದಿಲ್ಲ, ನಮಗೆ ವಿದ್ಯುತ್ ಕಡಿತವಾಗುವುದಿಲ್ಲ. ಸಾಗರದಿಂದ ಹೊಸನಗರಕ್ಕೆ ಬರುವ 33 ಕೆ.ವಿ. ಲೈನ್ ಇದೆ ಅದರ ಮೇಲೆ ಮರಗಳು ಬಿದ್ದುಬಿಡುತ್ತವೆ, ಇದು ಪ್ರತಿ ವರ್ಷವಾಗತಕ್ಕಂಥ ಕೆಲಸ. ಕಳೆದ ವರ್ಷ, 15 ದಿವಸ ಹಳ್ಳಿ ಕತೆ ಬೇರೆ, ಇಡೀ ಹೊಸನಗರ ಟೌನಿಗೇ ಕರೆಂಟ್ ಇರಲಿಲ್ಲ. ಟವರ್ ಸಿಸ್ಟಂ ಲೈನ್, ಅಂದರೆ ಟವರ್ ಹಾಕುವುದರ ಮೂಲಕ ಸ್ವಲ್ಪ ಅವಾಯ್ಡ್ ಮಾಡಬಹುದು ಮತ್ತು ಈ ವಿದ್ಯುತ್ ಲೈನ್‌ಗಳ ಪಕ್ಕ ಅಕೇಷಿಯ ಮರಗಳೇನಿದ್ದಾವೆ, ಅವನ್ನು ಕೂಡಲೆ ಕಟಾವ್ ಮಾಡಿಸಿ ಅದನ್ನು MPM ಗೆ ಸಾಗಿಸುತ್ತಿರೊ, ಇನ್ನೇನು ಮಾಡುತ್ತಿರೊ ಗೊತ್ತಿಲ್ಲ, ಅದನ್ನು ಮಾಡದಿದ್ದರೆ ನಮಗೆ ಕರೆಂಟ್ ಇರುವುದಿಲ್ಲ. 22 ದಿವಸಗಳಿಂದ ಕರೆಂಟ್ ಇಲ್ಲದಿರುವ ಈ 18 ಹಳ್ಳಿಗಳು ನಕ್ಸಲ್ ಅಫೆಕ್ಟೆಡ್ ಏರಿಯಾ, ಆ ಭಾಗದಲ್ಲಿ ನಕ್ಸಲರು ಓಡಾಡುತ್ತಿದ್ದಾರೆ, ಆ ಊರುಗಳಿಗೆ ನಕ್ಸಲರು ಹೋಗಿ, ನೋಡಿ ನಿಮ್ಮ ಊರಿಗೆ ಕರೆಂಟ್ ಇದೆಯಾ, ಬೆಂಗಳೂರಿನಲ್ಲಿ ಕರೆಂಟ್ ಇಲ್ಲವೆ, ಹೊಸನಗರದಲ್ಲಿ ಕರೆಂಟ್ ಇಲ್ಲವೆ, ನಮ್ಮ ಮಂತ್ರಿಗಳು, ಶಾಸಕರ ಮನೆಗಳಿಗೆ ಕರೆಂಟ್ ಇಲ್ಲವೆ ಎಂದು,